ಮಾಲೂರು ತಾಲ್ಲೂಕಿನಲ್ಲಿ ಕೊಳವೆ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸದೆ ಇರುವುದು.

ಶ್ರೀ ಹೆಚ್. ವಿ. ದ್ಯಾವೀರಪ್ಪ (ಮಾಲೂರು).—ಅಧ್ಯಕ್ಷರೇ, ಮಾಲೂರು ತಾಲೂಕಿನಲ್ಲಿ ೧೯೮೫–೮೬ ನೇ ಸಾಲಿನಲ್ಲಿ ೭೭ ಕೊಳವೆ ಬಾವಿಗಳನ್ನು ಹಾಕಿಸಿದ್ದು ನೀರು ಎತ್ತುವ ಪಂಪ್ಸೆಟ್‌ಗಳನ್ನು ಅಳವಡಿಸಿ ಸುಮಾರು ೬ ತಿಂಗಳಿಗಿಂತ ಹೆಚ್ಚಾಗಿದೆ. ಇದುವರೆಗೂ ವಿದ್ಯುಚ್ಛಕ್ತಿ ಇಲಾಖೆಯಿಂದ ವಿದ್ಯುಚ್ಛಕ್ತಿಯನ್ನು ಅಳವಡಿಸಿ ನೀರು ಎತ್ತುವ ವಿಷಯದಲ್ಲಿ ಮಾಡಿ ರೈತರಿಗೆ ಬೆಳೆ ಮಾಡಲು ಅನುಕೂಲ ಮಾಡಿಕೊಟ್ಟಿರುವುದಿಲ್ಲ ಈ ಕಾರ್ಯವನ್ನು ಆಗ್ಗೊ ಇಂಡಸ್ಟ್ರೀಸ್ ಅವರಿಗೆ ವಹಿಸಿರುವುದಾಗಿ ತಿಳಿದು ಬಂದಿದೆ. ಜಿಲ್ಲಾ ಪರಿಷತ್ತು ಆಗಲಿ, ಆಗ್ಗೊ ಇಂಡಸ್ಟ್ರೀಸ್‌ನವರಾಗಲೀ ತಮ್ಮ ಕರ್ತವ್ಯವನ್ನು ನಿರ್ವಹಿಸಿ ಕೂಡಲೇ ನೀರು ಎತ್ತುವ ವಿಷಯದಲ್ಲಿ ಮಾಡಿ ಸಂಬಂಧಪಟ್ಟ ಬಡ ರೈತರಿಗೆ ಅನುಕೂಲ ಮಾಡಿಸಿಕೊಟ್ಟು ಬರಗಾಲದ ಬವಣೆಯಿಂದ ತಪ್ಪಿಸುವ ವಿಷಯದಲ್ಲಿ ಮಾಡಬೇಕಾಗಿ ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಇಲಾಖೆ ರಾಜ್ಯ ಮಂತ್ರಿಗಳು) —ಮಾಲೂರು ತಾಲ್ಲೂಕಿನಲ್ಲಿ ೬ ತುಂತುರು ನೀರಾವರಿ ಯೋಜನೆಗಳು ಮಂಜೂರಾಗಿ ವಿವಿಧ ಹಂತದಲ್ಲಿ ಪ್ರಗತಿಯಲ್ಲಿವೆ. ಈ ಪೈಕಿ ಕಂಬಿಪುರ ತುಂತುರು ಯೋಜನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಇನ್ನು ಎರಡು ಯೋಜನೆಗಳಿಗೆ ಸಂಬಂಧಪಟ್ಟ ಇಲಾಖೆಯಿಂದ ಅರ್ಜಿ ಬಂದಿಲ್ಲ. ಕಂಬಿಹಳ್ಳಿ ಮತ್ತು ಇತರ ೩ ನೀರಾವರಿ ಯೋಜನೆಗಳಿಗೆ ೧-೮-೮೯ರಿಂದ ಡಬ್ಲ್ಯು.ಒ. ಆಗಿದೆ ೧೧ ಕೆ.ವಿ.—೧ ಕಿ.ಮೀ. ಲೈನು ಹಾಕಬೇಕು. ಮತ್ತು ಸೆಂಡರಿ ಲೈನು ವಿಸ್ತರಣೆಗೆ ೧ ಇಂಟು ೨೫ ಕೆ.ವಿ.ಎ. ಟ್ರಾನ್ಸ್ ಫಾರ್ಮರ್ ೧೦ ಕಂಬಿಗಳು ಈ ಎಲ್ಲಾ ಸಲಕರಣೆಗಳು ಇದ್ದು ಈ ತುಂತುರು ೩ ನೀರಾವರಿ ಯೋಜನೆಗಳಿಗೆ ೩೦-೯-೧೯೮೬ ರೊಳಗೆ ವಿದ್ಯುತ್ ಒದಗಿಸಲು ವ್ಯವಸ್ಥೆ ಮಾಡಲಾಗಿದೆ.

3. ಜಪ್ಪಿನ ಮೊಗರು ಕೂಡು ರಸ್ತೆಯ ಬದಿಯಲ್ಲಿ ತಂಗುದಾಣ ಕಟ್ಟುವುದು.

† **ಶ್ರೀ ಬಿ. ಎಂ. ಇದಿನಬ್ಬ** (ಉಳ್ಳಾಲ) —ಅಧ್ಯಕ್ಷರೆ, ಮಂಗಳೂರಿನ ಜಪ್ಪಿನ ಮೊಗರು ಕೂಡು ರಸ್ತೆಯಲ್ಲಿ ಬಳಿ ಬಸ್‌ಗಾಗಿ ತುಂಬಾ ಸಂಖ್ಯೆಯಲ್ಲಿ ಪ್ರಯಾಣಿಕರು ಜಮೆಯಾಗಿ ರಾಷ್ಟ್ರೀಯ ಹೆದ್ದಾರಿಯ ಬಳಿಯಲ್ಲಿ ನಿಲ್ಲುತ್ತಾರೆ. ಜಪ್ಪು ಕಡೆಯಿಂದ ಮಾಂಕಾಳಿಪಡ್ಡಿನಿಂದ ಈಗ ಸದ್ಯವಾದ ಹೊಸ ರಸ್ತೆ ಇಲ್ಲಿ ಬಂದು ಕೂಡುತ್ತವೆ. ಇಲ್ಲಿ ಬಂದು ಪ್ರಯಾಣಿಕರ ತಂಗುದಾಣ ಮಾಡಲು ಲಯನ್ಸ್ ಕ್ಲಬ್‌ನವರು ಮುಂದಾಗಿ ಶಿಲಾನ್ಯಾಸ ಕೂಡ ಮಾಡಿದ್ದು ತಂಗುದಾಣಕ್ಕಾಗಿ ಕಲ್ಲುಗಳನ್ನು ಜಮೆ ಮಾಡಿದ್ದರು. ಆದರೆ ರಾಷ್ಟ್ರೀಯ ಹೆದ್ದಾರಿಯ ಅಧಿಕಾರಿಗಳು ಆದನ್ನು ವಿರೋಧಿಸಿ ತಂಗುದಾಣ ಕಟ್ಟದಂತೆ ಆಕ್ಷೇಪ ಮಾಡಿರುತ್ತಾರೆ. ಇಲ್ಲಿ ಸಾವಿರಾರು ಪ್ರಯಾಣಿಕರು ಮಳೆ ಬಿಸಿಲಿಗೆ ಬಸ್‌ಗಾಗಿ ಕಾದು ನಿಲ್ಲುತ್ತಿರುವುದರಿಂದ ಇಲ್ಲೊಂದು ತಂಗುದಾಣ ಅತಿ ಅಗತ್ಯವಾಗಿರುತ್ತದೆ ಆದಕಾರಣ ಜಪ್ಪಿನ ಮೊಗ್ರು ಕೂಡುರಸ್ತೆಯ ಬಳಿ ಪ್ರಯಾಣಿಕರ ತಂಗುದಾಣ ಕಟ್ಟಲು ರಾಷ್ಟ್ರೀಯ ಹೆದ್ದಾರಿಯ ಅಧಿಕಾರಿಗಳು ಒಪ್ಪಿಗೆ ಕೊಡುವಂತೆ ಮಾಡುವುದು ಅತಿ ಪ್ರಾಮುಖ್ಯವಾಗಿರುತ್ತದೆ. ಈ ಕುರಿತು ಲೋಕೋಪಯೋಗಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ (ವೀನಸ್‌ಗಾರಿಕೆ ಸಚಿವರು).—ಅಧ್ಯಕ್ಷರೇ ಲೋಕೋಪಯೋಗಿ ಸಚಿವರು ದೆಹಲಿಗೆ ಹೋಗಿರುವುದರಿಂದ, ಅವರು ಬಂದಾಗ ಈ ವಿಷಯವನ್ನು ಅವರಿಗೆ ತಿಳಿಸುತ್ತೇವೆ.

4. ಶಿವಮೊಗ್ಗದಲ್ಲಿ ಗಣೇಶ ವಿಸರ್ಜನೆಯ ಸಮಯದಲ್ಲಿ ನಡೆದ ಗಲಭೆ.

ಶ್ರೀ ಯಂದಿಯಪ್ಪ (ಶಿಕಾರಿಪುರ) —ಅಧ್ಯಕ್ಷರೇ, ಶಿವಮೊಗ್ಗ ನಗರದಲ್ಲಿ ದಿನಾಂಕ ೬-೯-೧೯೮೬ ರಂದು ಹಿಂದೂ ಮಹಾಸಭಾ ಗಣಪತಿ ವಿಸರ್ಜನೆ ಮಾಡುವ ಸಂದರ್ಭದಲ್ಲಿ ಮೆರವಣಿಗೆಯಲ್ಲಿ ಬರುತ್ತಿರುವಾಗ ಗಲಾಟೆ ನಡೆದು ಪೋಲೀಸರು ಬಂದು ಸುತ್ತು ಆಶ್ರುವಾಯು ಪ್ರಯೋಗ ಮಾಡಿ ಅನೇಕರಿಗೆ ಗಾಯಗಳಾಗಿವೆ ಎಂದು ತಿಳಿದುಬಂದಿದೆ. ಗಣಪತಿ ಉತ್ಸವ ಸಮಿತಿಯವರು